ಕರ್ನಾಟಕ ವಿಧಾನಪರಿಷತ್
138 ನೇ ಅಧಿವೇಶನ

(3)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 15

ಸದಸ್ಯರ ಹೆಸರು : ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 19.07.2019

ಉತ್ತರಿಸುವ ಮಂತ್ರಿಯವರು : ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
1	ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಮುಖ್ಯ ರಸ್ತೆಗಳಾದ ದೇವದುರ್ಗದಿಂದ ಗೂಗಲ್ ಹಾಗೂ ಗೂಗಲ್‌ನಿಂದ ಅರಕೇರಾ ಮಾರ್ಗದ ಸುಂಕೇಶ್ವರಾಳ ರಸ್ತೆಗಳ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
2	ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು ಹಾಗೂ ಈ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗುವುದು ಯಾವಾಗ?	(1)<u>ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿಯಿಂದ ಅರಕೇರಾ, ಸುಂಕೇಶ್ವರಹಾಳ ಮಾರ್ಗವಾಗಿ ಗೂಗಲ್ ಕಿ.ಮೀ.**0.00** ರಿಂದ **71.15** ರವರೆಗೆ ನಿರ್ಮಾಣ ಮಾಡುವ ಕಾಮಗಾರಿಗೆ</u> 2012-13ನೇ ಸಾಲಿನ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ.92.00 ಕೋಟಿ ಅನುದಾನವು ಮಂಜೂರಾಗಿದ್ದ ಹಿನ್ನೆಲೆಯಲ್ಲಿ, ಟೆಂಡರ್ ಆಧಾರದ ಮೇರೆಗೆ ಈ ಕಾಮಗಾರಿಯ ಗುತ್ತಿಗೆ ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 71.15ಕಿ.ಮೀ. ಅಭಿವೃದ್ಧಿ ಪಡಿಸಬೇಕಾಗಿದ್ದು ಇದರಲ್ಲಿ 41.33 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.42.79 ಕೋಟಿ ವೆಚ್ಚ ಆಗಿರುತ್ತದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ. ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 29.82 ಕಿ.ಮೀ ಕಾಮಗಾರಿಯನ್ನು ತೆಗೆದುಕೊಳ್ಳಲು ಅಂದಾಜು ಮೊತ್ತ ರೂ.74.29 ಕೋಟಿ (2018-19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ

ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

(2) ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಗೂಗಲ್ ವಾಯಾ ಕೊಪ್ಪರ ಕಿ.ಮೀ. **0.00** ರಿಂದ **28.00** ರವರೆಗೆ ನಿರ್ಮಾಣ ಕಾಮಗಾರಿಗೆ 2012–13ನೇ ಸಾಲಿನ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ. 33.00 ಕೋಟಿ ಅನುದಾನವು ಮಂಜೂರಾಗಿದ್ದು, ಈ ಕಾಮಗಾರಿಗೆ ಟೆಂಡರ್ ಆಧಾರದ ಮೇರೆಗೆ ಗುತ್ತಿಗೆ ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 28.00 ಕಿ.ಮೀ. ಅಭಿವೃದ್ಧಿಪಡಿಸಬೇಕಾಗಿದ್ದು 5.55 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.8.48 ಕೋಟಿ ವೆಚ್ಚ ಆಗಿದ್ದು, ಆದರೆ ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.

ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 22.50 ಕಿ.ಮೀ ಕಾಮಗಾರಿ ತೆಗೆದುಕೊಳ್ಳಲು ಅಂದಾಜು ಮೊತ್ತ ರೂ. 36.39 ಕೋಟಿ (2018–19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

(3) ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಅರಕೇರಾ ಕ್ರಾಸ್ ವಾಯಾ ಗಲಗ ನಾರಭಂಡ ವರೆಗೆ ಕಿ.ಮೀ. **0.00** ರಿಂದ **28.20** ರವರೆಗೆ ನಿರ್ಮಾಣ ಮಾಡುವ ಕಾಮಗಾರಿಗೆ 2013–14ನೇ ಸಾಲಿನ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ. 29.50 ಕೋಟಿ ಅನುದಾನವು ಮಂಜೂರಾಗಿದ್ದು, ಈ ಕಾಮಗಾರಿಗೆ ಟೆಂಡರ್ ಆಧಾರದ ಮೇರೆಗೆ ಗುತ್ತಿಗೆ

		ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 28.20 ಕಿ.ಮೀ. ಅಭಿವೃದ್ಧಿ ಪಡಿಸಬೇಕಾಗಿದ್ದು, 22.63 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.18.78 ಕೋಟ್ಟಿ ವೆಚ್ಚ ಆಗಿದ್ದು, ಆದರೆ ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ. ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 5.57 ಕಿ.ಮೀ ಕಾಮಗಾರಿ ತೆಗೆದುಕೊಳ್ಳಲು ಅಂದಾಜು ಮೊತ್ತ ರೂ.15.22 ಕೋಟಿ (2018-19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಲೋಇ 35 ಸಿಐಎಸ್ 2019(ಇ)

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು